# ಆಫ್ಟರ್‌ಫೋಕಸ್



ಮಬ್ಬುಮಬ್ಬಾದ ಹಿನ್ನೆಲೆಯಲ್ಲಿ ಪ್ರಖರವಾದ ವಸ್ತುಗಳನ್ನು ಬಿಂಬಿಸಬೇಕಾ? ನಿಮ್ಮ ಫೋಟೊಗಳು ಡಿಎಸ್‌ಎಲ್‌ಆರ್ ಗುಣಮಟ್ಟದ್ದಾಗಿರಬೇಕಾ? ಹಾಗಾದರೆ ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಚಿತ್ರ ತೆಗೆದ ನಂತರ ಇಂತಹ ಪರಿಣಾಮಗಳನ್ನು ಮೂಡಿಸಬಹುದು. ಡಿಎಸ್‌ಎಲ್‌ಆರ್ ಕ್ಯಾಮೆರಾದ ವಿಶೇಷವೆಂದರೆ ಫೋಟೊಗಳಿಗೆ ಗಾಢತೆ (ಡೆಪ್ತ್)ಯನ್ನು ನೀಡುತ್ತದೆ. ಅಂದರೆ ಹಿನ್ನೆಲೆ ಮಸುಕಾಗಿ ಎದುರಿನಲ್ಲಿರುವ ವಸ್ತು ಅಥವಾ ವ್ಯಕ್ತಿಯ ಚಿತ್ರ ಪ್ರಖರವಾಗಿರುತ್ತದೆ. ಸೆಲ್‌ಫೋನ್‌ನ ಕ್ಯಾಮೆರಾದಲ್ಲಿ ಇದು ಸಾಧ್ಯವಿಲ್ಲ. ಆದರೆ ಫೋಟೊ ತೆಗೆದ ನಂತರ ಅದಕ್ಕೆ ಈ ಪರಿಣಾಮಗಳನ್ನು ನೀಡುವ ಆಫ್ಟರ್ ಫೋಕಸ್ ಅಪ್ಲಿಕೇಶನ್ ಇದೀಗ ಬಂದಿದೆ.

ಸದ್ಯ ಇದನ್ನು ಗೂಗ್ಲ್ ಪ್ಲೇನಿಂದ ಡೌನ್‌ಲೋಡ್ ಮಾಡಬಹುದು. ಈ ಅಪ್ಲಿಕೇಶನ್‌ನಿಂದ ಫೋಟೊ ತೆಗೆಯಬಹುದು ಅಥವಾ ನಿಮ್ಮ ಮೊಬೈಲ್ ಕ್ಯಾಮೆರಾದಿಂದಲೇ ತೆಗೆದುಕೊಳ್ಳಬಹುದು. ಮೊದಲು ಯಾವ ವಸ್ತು ಪ್ರಖರವಾಗಿ ಕಾಣಬೇಕೋ ಅದರ ಸುತ್ತ ಬೆರಳಿನಿಂದ ಗುರುತು ಮಾಡಿ. ನಂತರ ಕೆಳಗಡೆ ಸ್ಕ್ರೀನ್ ಕೆಳಗಡೆ ಇರುವ ಬಿಜಿ ಟ್ಯಾಬ್‌ನಿಂದ ಮಬ್ಬುಗೊಳಿಸುವ ಜಾಗವನ್ನು ಹುಷಾರಾಗಿ ಗುರುತು ಮಾಡಿ. ನಂತರ ಬಾಣದ ಗುರುತಿನ ಮೇಲೆ ಟ್ಯಾಪ್ ಮಾಡಿ ಮಸುಕು ಅಥವಾ ಪ್ರಖರ ಮಾಡಬಹುದು. ಆ್ಯಪರ್ಚರ್, ಫೇಡಿಂಗ್ ಮೊದಲಾದವುಗಳ ಜೊತೆಯೂ ನೀವು ಆಟ ಆಡಬಹುದು. ಈ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲೂ ಹಾಕಿಕೊಂಡು ಖುಷಿ ಪಡಬಹುದು.

## ಫೇಸ್‌ಬುಕ್‌ನಲ್ಲಿ ಅಂಗಾಂಗ ದಾನ

ಅಮೆರಿಕ ಮತ್ತು ಬ್ರಿಟನ್ನಿನಲ್ಲಿರುವ ಫೇಸ್‌ಬುಕ್ ಬಳಕೆದಾರರು ಅಂಗಾಂಗ ದಾನ ಮಾಡಲು ಬಯಸಿದರೆ ಅದರಲ್ಲೇ ಇರುವ 'ಹೆಲ್ತ್ ಆ್ಯಂಡ್ ವೆಲ್‌ನೆಸ್' ವಿಭಾಗದಲ್ಲಿ ಹೆಸರನ್ನು ನೊಂದಾಯಿಸಬಹುದು. ಫೇಸ್‌ಬುಕ್‌ನ ಸ್ಥಾಪಕ ಮಾರ್ಕ್ ಝುಕರ್‌ಬರ್ಗ್ ಇದನ್ನು ಆರಂಭಿಸಿದ್ದು ಈಗಾಗಲೇ ತಮ್ಮ ಹೆಸರನ್ನು ನೊಂದಾಯಿಸಿಕೊಂಡಿದ್ದಾರೆ. ಆ್ಯಪಲ್‌ನ ಸಂಸ್ಥಾಪಕ ಸ್ಟೀವ್ ಜಾಬ್ಸ್ ತಮ್ಮ ಈ ಕೆಲಸಕ್ಕೆ ಪ್ರೇರಣೆ ಎಂದಿರುವ ಝುಕರ್‌ಬರ್ಗ್, ಫೇಸ್‌ಬುಕ್ ಬಳಕೆದಾರರು ತಮ್ಮ ಕುಟುಂಬವರ್ಗ, ಸ್ನೇಹಿತರಿಗೆ ಈ ಬಗ್ಗೆ ಜಾಗೃತಿ ಮೂಡಿಸಬಹುದು ಎಂದಿದ್ದಾರೆ. ಈ ಸೌಲಭ್ಯವನ್ನು ಶೀಘ್ರವೇ ಇತರ ದೇಶಗಳಿಗೂ ವಿಸ್ತರಿಸಲು ಅವರ ನಿರ್ಧರಿಸಿದ್ದಾರೆ.

## ಇ-ಪುಸ್ತಕದಲ್ಲಿ 'ದಿ ಅವೆಂಜರ್ಸ್'

ಇ-ಪುಸ್ತಕ ಮತ್ತು ಟ್ಯಾಬ್ಲೆಟ್ ಬಂದ ನಂತರ ಹಲವರ ಓದಿನ ರೀತಿಯೇ ಬದಲಾಗಿಬಿಟ್ಟಿದೆ. ಕಾಗದದಲ್ಲಿ ಮುದ್ರಿಸಿರುವ ಅಕ್ಷರಗಳಿಗಿಂತ ಇಂತ ಎಲೆಕ್ಟ್ರಾನಿಕ್ ಉಪಕರಣಗಳೇ ಹೆಚ್ಚು ಆಪ್ತ ಎನಿಸಿಬಿಟ್ಟಿವೆ. ಆದರೆ ಇ- ಪುಸ್ತಕಗಳು ಸಾಂಪ್ರದಾಯಕ ಪುಸ್ತಕಗಳಂತೆ ಅಕ್ಷರ ಮತ್ತು ಚಿತ್ರಗಳನ್ನು ಹಾಕಿರುತ್ತವೆ. ಆದರೆ 'ದಿ ಅವೆಂಜರ್ಸ್: ಐರನ್ ಮ್ಯಾನ್ ಮಾರ್ಕ್ 7' ಗ್ರಾಫಿಕ್ ಕಾದಂಬರಿಯಾಗಿ ಬಂದಿದೆ. ಈ ಇ-ಪುಸ್ತಕದ ಕೆಲವು ಚಿತ್ರಗಳ ಮೇಲೆ ನೀವು ಬೆರಳಿನಿಂದ ಕುಟ್ಟಿದರೆ ಸಾಕು. ಅವು ನಿಮಗೆ ಏನನ್ನೋ ಉಸುರುತ್ತವೆ. ಉದಾಹರಣೆಗೆ ಇದರಲ್ಲಿರುವ ಐರನ್ ಮ್ಯಾನ್ ಟೋನಿ ಸ್ಟಾರ್ಕ್ ಕವಚವನ್ನು ರೂಪಿಸಿರುತ್ತಾನೆ. ಈ ಕವಚದ ಮೇಲೆ ಕುಟ್ಟಿದರೆ ಅದು ಶಸ್ತ್ರಾಸ್ತ್ರವನ್ನು ಉಗುಳುತ್ತದೆ. ಚೀಯರ್‌ಲೀಡರ್ ಮೇಲೆ ಕುಟ್ಟಿದರೆ ಅದು ಕೈ ಬೀಸುತ್ತದೆ. ಟೋನಿ ಸ್ಟಾರ್ಕ್ ಬಾಯಿಯಿಂದಲೇ ಕಥೆ ಕೇಳಬಹುದು. ಬೇಕಾದ ಶಬ್ದಗಳನ್ನು ಪುನರುಚ್ಚರಿಸುವಂತೆ ಮಾಡಿ ಭಾಷೆ ಕಲಿಯಬಹುದು. http://itunes.apple.com/in/app/marvels-avengers-iron-manನಿಂದ ಡೌನ್‌ಲೋಡ್ ಮಾಡಿಕೊಳ್ಳಿ.




## ಸುದ್ದಿಪ್ರಿಯರಿಗೆ ಗೂಗ್ಲ್ ಕರೆಂಟ್ಸ್

ಫ್ಲಿಪ್‌ಬೋರ್ಡ್, ಅರ್ಲಿ ಎಡಿಶನ್‌ನಂತಹ ಅಪ್ಲಿಕೇಶನ್‌ಗಳಿಂದಾಗಿ ಮೊಬೈಲ್‌ನಲ್ಲಿ ಸುದ್ದಿಯನ್ನು ದಿನಪತ್ರಿಕೆಯ ರೀತಿಯಲ್ಲೇ ಓದಬಹುದು. ಗೂಗ್ಲ್ ಕೂಡಾ ಕಳೆದ ವರ್ಷ ಗೂಗ್ಲ್ ಕರೆಂಟ್ಸ್ ಮೂಲಕ ಈ ಕ್ಷೇತ್ರವನ್ನು ಪ್ರವೇಶಿಸಿತ್ತು. ಈಗ ಅದನ್ನು ಸುಧಾರಿಸಲಾಗಿದ್ದು ಭಾರತದಲ್ಲಿ ಕೂಡಾ ಲಭ್ಯ.

ನಿಮ್ಮ ಮೊಬೈಲ್‌ನಲ್ಲಿ ಗೂಗ್ಲ್ ಕರೆಂಟ್ಸ್ ಅನ್ನು ಅಳವಡಿಸಿ. ನಿಮಗೆ ಬೇಕಾದ ವೆಬ್‌ಸೈಟ್ ಮತ್ತು ವಿಷಯವನ್ನು ಆಯ್ಕೆ ಮಾಡಿ. ಈ ಅಪ್ಲಿಕೇಶನ್ ನೀವು ಆಯ್ಕೆ ಮಾಡಿದ ಸುದ್ದಿಯನ್ನು ಡಿಜಿಟಲ್ ನಿಯತಕಾಲಿಕದ ರೂಪದಲ್ಲಿ ನೀಡುತ್ತದೆ. ಕ್ರೀಡೆ, ಸುದ್ದಿ, ವಾಣಿಜ್ಯ, ಮನರಂಜನೆ ಹೀಗೆ ಹಲವು ವಿಷಯಗಳು ಇಲ್ಲಿ ಲಭ್ಯ. ಇದಲ್ಲದೇ ಅಪ್ಲಿಕೇಶನ್ ಕೆಲವು ವೆಬ್‌ಸೈಟ್‌ಗಳನ್ನು ಶಿಫಾರಸ್ಸು ಮಾಡುತ್ತದೆ. ಜೊತೆಗೆ ಓದಲು ಅನುಕೂಲ. ಫೋಟೊ, ಶೀರ್ಷಿಕೆ ಸ್ಪಷ್ಟವಾಗಿ ಗೋಚರಿಸುತ್ತವೆ. ಇದನ್ನು ಬೇರೆ ಭಾಷೆಗಳಿಗೆ ಕೂಡಾ ಭಾಷಾಂತರಿಸುವ ಸೌಲಭ್ಯವಿದೆ. ಜಪಾನೀಸ್, ಚೈನೀಸ್, ಅರೆಬಿಕ್.. ಆದರೆ ಯಾವುದೇ ಭಾರತೀಯ ಭಾಷೆಯನ್ನು ಇನ್ನೂ ಅಳವಡಿಸಿಲ್ಲ. ಗೂಗ್ಲ್ ಪ್ಲೇನಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

■ ಎಸ್.ತುಂಬೆ